**Press Coverage about the Protest Programme on 22-11-10 by Beedi Vyparigala Hakkottaya Andolana**

# Kannada Prabha – 23-11-10

## ಅಂಗಡಿ ತೆರವು ವಿರೋಧಿಸಿ ಬೀದಿ ವ್ಯಾಪಾರಿಗಳ ಧರಣಿ

**ಬೆಂಗಳೂರು:** ಬೀದಿಬದಿ ವ್ಯಾಪಾರಿಗಳ ಅಂಗಡಿ ತೆರವುಗೊಳಿಸದಂತೆ ಹಾಗೂ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಬೀದಿ ವ್ಯಾಪಾರಿಗಳ ಹಕ್ಕೊತ್ತಾಯ ಆಂದೋಲನದ ಕಾರ್ಯಕರ್ತರು ಸೋಮವಾರ ಬಿಬಿಎಂಪಿ ಮುಖ್ಯ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಬಿಬಿಎಂಪಿ, ಪೊಲೀಸ್ ಹಾಗೂ ಮುಜರಾಯಿ ಇಲಾಖೆ ಅಧಿಕಾರಿಗಳು ಯಾವುದೇ ಮುನ್ಸೂಚನೆ ನೀಡದೆ ಬೀದಿಬದಿ ವ್ಯಾಪಾರಿಗಳ ಅಂಗಡಿ ತೆರವುಗೊಳಿಸುತ್ತಿರುವ ಕ್ರಮವನ್ನು ಕೂಡಲೇ ನಿಲ್ಲಿಸಬೇಕು. ಈಗಾಗಲೇ ತೆರವುಗೊಳಿಸಿ ಬೀದಿಪಾಲು ಮಾಡಿರುವ ವ್ಯಾಪಾರಿಗಳಿಗೆ ಮತ್ತೆ ಅದೇ ಸ್ಥಳದಲ್ಲಿ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಶಿವಾಜಿನಗರ, ಜಯನಗರ, ಗಾಂಧಿಬಜಾರ್, ಹಲಸೂರು ಸೇರಿದಂತೆ ವಿವಿಧೆಡೆ ಬೀದಿ ವ್ಯಾಪಾರಿಗಳ ಅಂಗಡಿ ತೆರವುಗೊಳಿಸಲಾಗಿದೆ. ಇದರಿಂದ ವ್ಯಾಪಾರಿಗಳು ಜೀವನ ಸಾಗಿಸುವುದು ಕಷ್ಟವಾಗಿದೆ. ಆದ್ದರಿಂದ ಅವರಿಗೆ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸುವಂತೆ ಒತ್ತಾಯಿಸಿದರು.

ಪ್ರತಿಭಟನಾಕಾರರ ಮನವಿ ಸ್ವೀಕರಿಸಿದ ಮೇಯರ್ ಎಸ್.ಕೆ.ನಟರಾಜ್, ಈ ಬಗ್ಗೆ ಆಯುಕ್ತರೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದರು. ನೂರಾರು ಮಂದಿ ಬೀದಿ ವ್ಯಾಪಾರಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



■ **ಬೇಡಿಕೆಗಳು:** 1. ಇದುವರೆಗೂ ತೆರವುಗೊಳಿಸಿರುವ ಎಲ್ಲಾ ಬೀದಿ ವ್ಯಾಪಾರಿಗಳಿಗೆ ಈ ಹಿಂದಿನ ಸ್ಥಳದಲ್ಲೇ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸಬೇಕು.

2. ಬೀದಿ ವ್ಯಾಪಾರಿಗಳಿಗೆ ವ್ಯಾಪಾರ ಮಾಡಲು ಸಹಾಯವಾಗುವಂತೆ ಫುಟ್‌ಪಾತ್‌ನ ಕೊನೆಯಲ್ಲಿ ಪ್ರತಿಯೊಬ್ಬರಿಗೂ **1X1** ಮೀಟರ್ ಅಳತೆಯ ಜಾಗ ನೀಡಬೇಕು.

3. ಬೀದಿ ವ್ಯಾಪಾರಿಗಳ ರಾಷ್ಟ್ರೀಯ ನೀತಿ 2009ಕ್ಕೆ ಅನುಗುಣವಾಗಿ ಬೀದಿ ವ್ಯಾಪಾರ ಕುರಿತ ಯೋಜನೆ ರೂಪಿಸಬೇಕು.

**Udayavani – 23-11-10**

# ಬೀದಿ ವ್ಯಾಪಾರಿಗಳ ಪ್ರತಿಭಟನೆ

**ಬೆಂಗಳೂರು:** ಶಿವಾಜಿನಗರ, ಜಯನಗರ, ಅಲಸೂರು ಮತ್ತು ಗಾಂಧಿನಗರದಲ್ಲಿ ತೆರವು ಮಾಡಿರುವ ಬೀದಿ ಬದಿ ವ್ಯಾಪಾರಿ ಸ್ಥಳಗಳಲ್ಲಿ ಮತ್ತೆ ವ್ಯಾಪಾರ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿ ಬೀದಿ ವ್ಯಾಪಾರಿಗಳು ಪಾಲಿಕೆಯ ಕೇಂದ್ರ ಕಚೇರಿ ಆವರಣದಲ್ಲಿಂದು ಪ್ರತಿಭಟನೆ ನಡೆಸಿದರು.

ಬೀದಿ ವ್ಯಾಪಾರಿಗಳ ಹಕ್ಕೊತ್ತಾಯ ಆಂದೋಲನ ಆಶ್ರಯದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ನೂರಾರು ವ್ಯಾಪಾರಿಗಳು, ನಮ್ಮನ್ನು ಬಲತ್ಕಾರದಿಂದ ತೆರವು ಮಾಡಲಾಗಿದ್ದು ಜೀವನೋಪಾಯಕ್ಕಾಗಿ ಬೀದಿ ಬದಿ ವ್ಯಾಪಾರವನ್ನೇ ನಂಬಿದ್ದ ನಮಗೆ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈವರೆಗೆ ತೆರವುಗೊಳಿಸಿದ ಎಲ್ಲಾ ಬೀದಿ ವ್ಯಾಪಾರಿಗಳಿಗೂ ಹಿಂದಿನ ಸ್ಥಳದಲ್ಲೇ ಮತ್ತೆ ವ್ಯಾಪಾರ ಮಾಡಲು ಅನುವು ಮಾಡಿಕೊಡಬೇಕು. ಪ್ರತಿಯೊಬ್ಬರಿಗೂ 1-1 ಮೀಟರ್ ಸ್ಥಳದಲ್ಲಿ ಪಾದಚಾರಿ ಮಾರ್ಗದ ಕೊನೆಯಲ್ಲಿ ಜಾಗ ಕಲ್ಪಿಸಬೇಕು ಎಂಬ ಬೇಡಿಕೆ ಮುಂದಿಟ್ಟರು. ಪಾಲಿಕೆಯು ಕಾನೂನು ಪ್ರಕ್ರಿಯೆ ಅನುಸರಿಸದೆ ಯಾವುದೇ ಎತ್ತಂಗಡಿ ಮಾಡಬಾರದು. ವ್ಯಾಪಾರಿಗಳ ವಿರುದ್ಧದ ದೌರ್ಜನ್ಯ ಕೂಡಲೇ ನಿಲ್ಲಿಸಬೇಕು. ನಗರ ಸೌಂದರ್ಯದ ಹೆಸರಿನಲ್ಲಿ ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಬಾರದು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಜುಲೈನಲ್ಲಿ ಮಳಿಗೆಗಳನ್ನು ತೆರವುಗೊಳಿಸಲಾಯಿತು. ಕಳೆದ ಅಕ್ಟೋಬರ್ 21 ರಂದು ಧರಣಿ ನಡೆಸಿದ ಸಂದರ್ಭದಲ್ಲಿ ಮಹಾಪೌರರು, ಶೀಘ್ರವೇ ಅಧಿಕಾರಿಗಳ ಸಭೆ ಕರೆದು ಚರ್ಚಿಸುವುದಾಗಿ ತಿಳಿಸಿದ್ದರು. ಆದರೆ, ಒಂದು ತಿಂಗಳಾದರೂ ಸಭೆಯೂ ನಡೆಯಲಿಲ್ಲ. ಸಮಸ್ಯೆಯೂ ಬಗೆಹರಿಯಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.



**ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಬೀದಿ ಬದಿ ವ್ಯಾಪಾರಿಗಳ ಹಕ್ಕೊತ್ತಾಯ ಆಂದೋಲನದ ಸದಸ್ಯರು ಬಿಬಿಎಂಪಿ ಕಚೇರಿ ಎದುರು ಸೋಮವಾರ ಧರಣಿ ನಡೆಸಿದರು.**

## Deccan Herald – 23-11-10

# Evicted hawkers left high and dry

**BANGALORE:** Mukthiyar who sold woollen clothes on the streets of Shivajinagar is now a shattered man. This hawker was evicted four months ago from the spot where he ran his business.

"I am surviving on loans borrowed from various sources. Even Bakrid was not celebrated in my house for want of money," the middle-aged man and father of four said. The plight of over 600 hawkers evicted by the Bruhat Bangalore Mahanagara Palike is no different. The Palike is bound by the Supreme Court direction that has banned hawking on the sidewalks.



Tired of waiting for a response from the Palike, members of street vendors associations across Bangalore staged a protest on Monday. They alleged that their pleas to the police and the BBMP had fallen on deaf ears.

However, the Mayor has said that a meeting would be held with the associations on December 15 on accommodating street vendors on pavements. The word was sent through Additional Commissioner (Welfare) V Ashok.

Street vendors have asked for restoration of their livelihood by providing them with a 1 x 1 sq metre space on the extreme sides of the pavement. They sought the Palike to reframe its regulation on street hawkers in accordance with the SC judgment and the National Policy on Urban Street Vendors 2009. They also demanded that the BBMP should not carry out evictions in violation of the process of law.

**DH News Service**

opment Corporation Limited: Exhi-

## The New Indian Express – 23-11-10

# Street hawkers up in arms against BBMP

**DC CORRESPONDENT**
BENGALURU

**Nov. 22:** The members of Beedi Vyapaarigala Hakkottaya Andolana and other street hawkers held a protest in front of the BBMP head office on Monday from 9 am to 6 pm demanding that they be given space on footpath to sell their wares.

Vendors from Shivajinagar, Gandhinagar, Jayanagar and Ulsoor protested against their eviction by the BBMP.

The vendors had held a similar protest in October and were assured a meeting to resolve their issues. But they complained that no officials or representatives had spoken to them about the same.

The protesters were assured of support by the opposition leader in BBMP council M. Nagaraj, who promised them a meeting on December 15.

**The Hindu – 23-11-10**

# Street vendors want livelihood back

Staff Reporter

**BANGALORE:** Street vendors from Shivajinagar, Ulsoor and Gandhinagar staged a dharna at the Bruhat Bangalore Mahanagara Palike head office protesting against the civic authority's apathy in restoring them their means of livelihood.

Staging the protest under the aegis of Beedhi Vyaaparigala Hakkotaya Andolana, the vendors demanded an end to the "unconstitutional" evictions that were also in violation of the National Street Vendors Policy. The street vendors staged a protest till around 4 p.m.

## Evicted

On behalf of the andolana, Vinay Sreenivasa said that in July, more than 600 street vendors were evicted without any prior notice and their belongings thrown out.

They had staged a protest at the BBMP office on October 21 this year demanding restoration of their livelihood.

"Mayor S.K. Nataraj had then assured us of a meeting along with Commissioner Siddaiah by October 28. Even after a month, it was not done. We are left with no option but to stage another protest," he said.

## Mayor's refusal

He said the Mayor refused to meet them and sent word through Additional Commissioner (Welfare) V. Ashok that he would meet with them on December 15 at 5 p.m.

Later, Opposition Leader M. Nagaraj also assured the vendors that he would ensure that a meeting is fixed for that day. He also said that if the meeting does not take place, he would then join the protest.

The evicted vendors want their old place back and a space of 1 m by 1 m be allotted to each of them.